ಅವಳ ಓದಿನ ದಿಕ್ಕೇ ಬದಲಾಯ್ತು. ಮೊದಮೊದಲು ಶರ್ಮಿಳಾ ಅವಳಿಗೆ ಚಾರ್ಲಸ್ ಡಿಕನ್ಸ್‌ನ 'ಓಲಿವರ್ ಟ್ವಿಸ್ಟ್' ಪುಸ್ತಕ ಕೊಟ್ಟಳು. ನಂತರ ಕೊಟ್ಟ ಸಣ್ಣ ಪುಸ್ತಕ ಡುಮಾಸ್‌ನ 'ದಿ ಥ್ರೀ ಮಸ್ಕೇಟಿಯರ್ಸ್'. ಇವೆಲ್ಲ ಮೂಲದಿಂದ ಸಂಕ್ಷೇಪಗೊಂಡ ಆವೃತ್ತಿಗಳು. ಓದುವ ಹವ್ಯಾಸ ಬೆಳೆದಂತೆ ಇರ್ನೆ ಒಳ್ಳೆಯ ಹಾಗೂ ಸಾಧಾರಣ ಪುಸ್ತಕಗಳ ನಡುವಿನ ವ್ಯತ್ಯಾಸ ಗುರುತಿಸುವುದನ್ನು ಕಲಿತಳು. ಇತ್ತೀಚೆಗಂತೂ ಶಾಲೆಯಲ್ಲಿ ಮಧ್ಯಾಂತರ ಬಿಡುವು ಬಿಟ್ಟಾಗ ಇರ್ನೆ ಮತ್ತು ಶರ್ಮಿಳಾ ಮಾತಾಡುತ್ತಿದ್ದುದು ಕೇವಲ ಪುಸ್ತಕಗಳ ಬಗೆಗೆಯೇ. ಶರ್ಮಿಳಾ ಕೊಂಕಣಿ ಪುಸ್ತಕಗಳನ್ನು ಪ್ರೀತಿಯಿಂದ ಓದುತ್ತಿದ್ದಳು. ನಂತರ ಮನೋಹರ ಸರದೇಸಾಯಿ ಅವರ ಕವಿತೆಗಳನ್ನು ಇರ್ನೆಗೆ ಓದಿ ಹೇಳತೊಡಗಿದಳು. ಶರ್ಮಿಳಾಳ ಸಹವಾಸದಲ್ಲಿ ಇರ್ನೆ ಕೂಡ ಕೊಂಕಣಿ ಪುಸ್ತಕಗಳನ್ನು ಓದಲು ಸುರು ಮಾಡಿದಳು. ಪುಸ್ತಕಗಳ ಚರ್ಚೆಯಲ್ಲಿ ಮುಳುಗಿ ಹೋಗುತ್ತಿದ್ದ ಅವರಿಬ್ಬರಿಗೂ ಮಧ್ಯಾಹ್ನದ ಬಿಡುವಿನ ವೇಳೆ ಹೋದದ್ದೇ ಗೊತ್ತಾಗುತ್ತಿರಲಿಲ್ಲ.

"ನೀನೀಗ ಓದುತ್ತಿರುವುದು ಒಂಬತ್ತನೆಯ ಕ್ಲಾಸಿನಲ್ಲಿ. ಮುಂದಿನ ವರ್ಷವೇ ಎಸ್ಸೆಸ್ಸೆಲ್ಸಿ ವರ್ಗಕ್ಕೆ ಹೋಗುತ್ತೀ. ಇಂಥ ಹೊತ್ತಲ್ಲಿ ನೀನು ಅನವಶ್ಯಕವಾದ ಬೇರೆ ಪುಸ್ತಕಗಳನ್ನು ಓದುತ್ತ ಸಮಯ ಹಾಳುಮಾಡಕೂಡದು. ಪಬ್ಲಿಕ್ ಪರೀಕ್ಷೆಯಲ್ಲಿ ಒಳ್ಳೆಯ ಮಾರ್ಕ್ಸ್ ಗಳಿಸಬೇಕೆಂದರೆ ನೀನು ಈಗಿನಿಂದಲೇ ಮನಸ್ಸುಗೊಟ್ಟು ಚೆನ್ನಾಗಿ ಓದಬೇಕು" ಎಂದು ತಾಯಿ ಆಗಾಗ ಎಚ್ಚರಿಸುತ್ತಿದ್ದಳಾದರೂ, ಇರ್ನೆ ಅದಾವುದರ ಬಗೆಗೂ ಚಿಂತಿಸುತ್ತಿರಲಿಲ್ಲ. ಶರ್ಮಿಳಾಳೊಂದಿಗೆ ಗೆಳೆತನ ಶುರುವಾದ ನಂತರ ಅವಳು ಮೊದಲಿಗಿಂತಲೂ ಹೆಚ್ಚಿನ ಅಂಕಗಳನ್ನು ಗಳಿಸತೊಡಗಿದ್ದಳು. ಇರ್ನೆ ಗಣಿತದಲ್ಲಿ ತುಂಬಾ ಬುದ್ಧಿವಂತೆಯಾಗಿದ್ದಳು. ನೂರಕ್ಕೆ ಒಂದೆರಡೇ ಅಂಕ ಕಡಿಮೆ ಬಂದರೂ ಅವಳು ಸಿಡಿಮಿಡಿಗೊಳ್ಳುತ್ತಿದ್ದಳು. ಶರ್ಮಿಳಾ ಇಂಗ್ಲಿಷ್ ಮತ್ತು ಕೊಂಕಣಿ ವಿಷಯಗಳಲ್ಲಿ ಹೆಚ್ಚು ಜಾಣಳಾಗಿದ್ದಳು. ಇರ್ನೆಯ ಗೆಳೆತನದ ಪರಿಣಾಮವಾಗಿ ಅವಳೂ ಗಣಿತದಲ್ಲಿ ಒಳ್ಳೆಯ ಸಾಧನೆ ಮಾಡತೊಡಗಿದ್ದಳು. ಅವರಿಬ್ಬರ ಗೆಳೆತನ ಹೀಗೆ ತುಂಬ ಅನ್ಯೋನ್ಯವಾಗಿರುವಾಗಲೇ ಗೋಮಾಂಸದ ಬರ್ಗರಿನ ಆ ಘಟನೆ ಅಚಾನಕಾಗಿ ಅಡ್ಡಬಂದು, ಯಾಕಾದರೂ ಇದು ಹೀಗಾಯಿತೋ ಎನಿಸತೊಡಗಿತು.

ಶಾಲೆಯವರು ಮಕ್ಕಳನ್ನೆಲ್ಲ ಒಮ್ಮೆ 'ಕಾಬೋ ಡೆ ರಾಮಾ'ಗೆ ವನಭೋಜನಕ್ಕೆಂದು ಕರೆದುಕೊಂಡು ಹೋಗಿದ್ದರು. ಶರ್ಮಿಳಾ ಮತ್ತು ಇರ್ನೆ ಕೂಡ ಆ ಮಕ್ಕಳಲ್ಲಿದ್ದರು. ಅಲ್ಲಿಗೆ ಹೋದಾಗ ಅವರಿಗೆ ತಾವು ಚಿಕ್ಕವರಿದ್ದಾಗ ಓದಿದ್ದ ಕೋಟೆ–ಕೊತ್ತಲಗಳ ಆಕರ್ಷಕ ಕತೆಗಳು ನೆನಪಾದವು. ಸುಮಾರು ಹೊತ್ತು ಅವರು ಆ ಜಾಗೆಯಲ್ಲಿ ಸಂತೋಷದಿಂದ ನಲಿದಾಡಿದರು. ಮಧ್ಯಾಹ್ನದ ಹೊತ್ತಿಗೆ ಹಸಿವಾದಾಗ ಮಕ್ಕಳೆಲ್ಲ ತಮ್ಮ ತಮ್ಮ ಊಟದ ಡಬ್ಬಿಗಳನ್ನು ಬಿಚ್ಚಿ ತಿನ್ನತೊಡಗಿದರು. ಇರ್ನೆ ಮತ್ತು ಶರ್ಮಿಳಾ ಅಲ್ಲಿಯೇ ಇದ್ದ ಹುಣಸೆಮರದ ನೆರಳಲ್ಲಿ ಕುಳಿತು ತಮ್ಮ ಊಟದ ಡಬ್ಬಿಗಳನ್ನು ತೆರೆದರು. "ನಾವಿಬ್ಬರೂ ನಮ್ಮ ನಮ್ಮ ಡಬ್ಬಿಗಳಲ್ಲಿರುವ ತಿಂಡಿಯನ್ನು ಹಂಚಿಕೊಂಡು ತಿನ್ನೋಣ" ಎಂದ ಶರ್ಮಿಳಾ, ತನ್ನ ತಾಯಿ ಕಳಿಸಿದ್ದ ಪಲಾವ್‌ನಲ್ಲಿ ಒಂದಿಷ್ಟನ್ನು ಇರ್ನೆಗೆ ಕೊಟ್ಟಳಲ್ಲದೆ, "ನೀನು ಏನು ತಂದಿರುವಿ? ಎಷ್ಟೊಂದು ಗಮಗಮ ವಾಸನೆ ಬರುತ್ತಿದೆಯಲ್ಲ?" ಎಂದು ಕುತೂಹಲದಿಂದ ಕೇಳಿದಳು. ಅವಳು ಹಾಗೆನ್ನುವಷ್ಟರಲ್ಲಿಯೇ ಇರ್ನೆ ತಾನು ತಂದಿದ್ದ ಬರ್ಗರ್‌ಗಳಲ್ಲಿ ಒಂದು ತುಂಡನ್ನು ಶರ್ಮಿಳಾಳ ಬಾಕ್ಸ್‌ನಲ್ಲಿ ಹಾಕಿಬಿಟ್ಟಳು. ಅದಕ್ಕೆ ಔಪಚಾರಿಕವಾಗಿ ಶರ್ಮಿಳಾ "ಬೇಡ ಬೇಡ... ನೀನು ತಿನ್ನು..." ಎನ್ನುತ್ತಿರುವಾಗಲೇ